# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ,ಬಿ.ಹೆಚ್.ರಸ್ತೆ ತುಮಕೂರು-527 103

ದೂರವಾಣಿ : 0816-2270715 ಫ್ಯಾಕ್ಸ್ : 0816-2270719

ಸಂಖ್ಯೆ:ತುವಿ:ಹವಿ:ಅ.ಉ.ಸ.ಬಿಲ್ಲು:2025-26 ದಿನಾಂಕ :08.12.2025

## ಸುತ್ತೋಲೆ

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆ ಬಿಲ್ಲುಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ಸಂಖ್ಯೆ:ತು.ವಿ:ಹ.ವಿ:2020-21/211 ದಿನಾಂಕ:27.10.2020

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಬಿಲ್ಲುಗಳನ್ನು ಸಲ್ಲಿಸಲಾಗಿದ್ದು, ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿದ್ದು, ಈ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಲಾಗಿರುತ್ತದೆ.

1) ತರಗತಿ ತೆಗೆದುಕೊಂಡ ದಿನಾಂಕ ಮತ್ತು ಸಮಯ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ.
2) ತರಗತಿ ತೆಗೆದುಕೊಂಡ ವಿಷಯ ದಿನಚರಿಯಲ್ಲಿ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ.
3) ಅತಿಥಿ ಉಪನ್ಯಾಸಕರ ಹೆಸರಿನೊಂದಿಗೆ ಹಾಜರಾತಿ ಪಟ್ಟಿಯಲ್ಲಿ ಹಾಜರಾದ ದಿನಾಂಕಗಳ (ರಜೆ ವಿವರಗಳೊಂದಿಗೆ) ವಿವರಗಳು ಅಪೂರ್ಣವಾಗಿ ನಮೂದಿಸಲಾಗಿರುತ್ತದೆ.
4) ಪಾವತಿಸಬೇಕಾದ ಎಸ್‌ಬಿಐ ಬ್ಯಾಂಕ್ ಖಾತೆ ಸಂಖ್ಯೆ ಐಎಫ್‌ಎಸ್‌ಸಿ ಕೋಡ್ ಸ್ಪಷ್ಟವಾಗಿ ಮಾಹಿತಿ ನೀಡಿರುವುದಿಲ್ಲ.
5) ಪ್ಯಾನ್ ನಂಬರ್ ಜೆರಾಕ್ಸ್ ಪ್ರತಿ ಲಗತ್ತಿಸದೆ ಇರುವುದು. (ಆಧಾರ್ ಸಂಖ್ಯೆಗೆ ಲಿಂಕ್ ಮಾಡಿರುವ ಪ್ಯಾನ್ ಸಂಖ್ಯೆ)
6) ಸಂಭಾವನೆ ಬಿಲ್ಲಿನ ಮೊತ್ತದಲ್ಲಿ ಆದಾಯ ತೆರಿಗೆ ಇಲಾಖೆಯ ನಿಯಮಾನುಸಾರ ಟಿಡಿಎಸ್ ಕಟ್ಟಾಯಿಸದಿರುವುದು.

ಮೇಲ್ಕಂಡ ಎಲ್ಲಾ ಮಾಹಿತಿಯನ್ನು ಬಿಲ್ಲುಗಳಲ್ಲಿ ಕಡ್ಡಾಯವಾಗಿ ನಮೂದಿಸಿ ಪರಿಶೀಲನೆಯೊಂದಿಗೆ ಪ್ರಾಂಶುಪಾಲರು ಮತ್ತು ಮುಖ್ಯಸ್ಥರ ದೃಢೀಕೃತ ಮೇಲು ಸಹಿಯೊಂದಿಗೆ ಬಿಲ್ಲುಗಳನ್ನು ಕಡ್ಡಾಯವಾಗಿ ಈಗಾಗಲೇ ತಿಳಿಸಲಾದ ಅವಧಿಯೊಳಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಈಗಾಗಲೇ ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿ ಬಿಲ್ಲುಗಳನ್ನು ಸಲ್ಲಿಸುವಂತೆ ಹಲವಾರು ಬಾರಿ ಮೌಖಿಕವಾಗಿ ಹಾಗೂ ಪತ್ರ ಮುಖೇನ ತಿಳಿಸಲಾಗಿದಾಗ್ಯೂ ಯಾವುದೇ ಕ್ರಮಕೈಗೊಳ್ಳದೇ, ತಡವಾಗಿ ಬಿಲ್ಲುಗಳನ್ನು ಸಲ್ಲಿಸಿ ಬಿಲ್ಲುಗಳ ಪಾವತಿಗೆ ಒತ್ತಡ ತರುತ್ತಿರುವುದು ಕಂಡುಬಂದಿರುತ್ತದೆ.

ಇನ್ನು ಮುಂದೆ ಈಗಾಗಲೇ ತಿಳಿಸಿರುವಂತೆ ಪ್ರತಿ ಮಾಹೆಯ 02 ನೇ ತಾರೀಖಿನೊಳಗೆ ಬಿಲ್ಲುಗಳನ್ನು ಕಡ್ಡಾಯವಾಗಿ ಸಲ್ಲಿಸಲು ತಿಳಿಸಲಾಗಿದೆ ತಪ್ಪಿದ್ದಲ್ಲಿ, ಈ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದು ಹಾಗೂ ತಡವಾಗಿ ಸಲ್ಲಿಸಿದ ಬಿಲ್ಲುಗಳನ್ನು 15 ತಾರೀಖಿನ ನಂತರ ಪಾವತಿಗೆ ಕ್ರಮವಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಹಣಕಾಸು ಅಧಿಕಾರಿಗಳು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.

ಇವರಿಗೆ ಸೂಕ್ತ ಕ್ರಮಕ್ಕಾಗಿ

1) ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2) ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3) ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4) ಅಧ್ಯಕ್ಷರು/ಸಂಯೋಜಕರು, ಸಂಬಂಧಿಸಿದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಜ್ಞಾನಸಿರಿ ಕ್ಯಾಂಪಸ್, ಬಿದರಕಟ್ಟೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5) ಸಿಸ್ಟಂ. ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಅಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಅಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.